## ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.

## ಎಸ್.ಸಿ. 68/2023

1. ಯಾದಗಿರಿ ನಗರ ಪೊಲೀಸಠಾಣೆ .....ಫಿರ್ಯಾದಿ

ವಿರುದ್ಧ

1. ಮಹ್ಮದ್ ಅನಾಸ್ ಖಾನ್ @ ರಬ್ಬಾನಿ ಮತ್ತು ಇತರರು .....ಆರೋಪಿತರು

**ದೋಷಾರೋಪಣೆ**

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ಮಹ್ಮದ್ ಅನಾಸ್ ಖಾನ್ @ ರಬ್ಬಾನಿ ತಂದೆ ಮಹ್ಮದ್ ಅಜ್ಮತ್ ಖಾನ್, ವಯಸ್ಸುಃ 20 ವರ್ಷ, ಉದ್ಯೋಗಃ ಅಡುಗೆಭಟ್ಟ ಸಾಃ ಹೈಮದ್ ಹೋಟೇಲ್ ಹತ್ತಿರ ರಿಯಾಸತ್ ನಗರ ಸಂತೋಷ ನಗಟ ಹೈದ್ರಾಬಾದ
2. ಅಬ್ದುಲ್ ಸತ್ತಾರ್ ತಂದೆ ಅಬ್ದುಲ್ ಸಮದ್ ಸತ್ತಾರ್, ವಯಸ್ಸುಃ 59 ವರ್ಷ, ಉದ್ಯೋಗಃ ಹೊಟೇಲ್ ವ್ಯಾಪಾರ ಸಾಃ ಮಿಲತ್ ನಗರ ಯಾದಗಿರಿ
3. ಖಾನುಜಾನ್ ತಂದೆ ಜಾಡೇಸರ್ ಜಾನು, ವಯಸ್ಸುಃ 25 ವರ್ಷ, ಉದ್ಯೋಗಃ ಅಡುಗೆ ಸಹಾಯಕ ಸಾಃ ಸಾಬುಡಾ ತಾಃ ಬೆಲ್ಧಾ ಜಿಃ ಪಶ್ಚಿಮ ಮೇದಿನಪುರ ಪಶ್ಚಿಮ ಬಂಗಾಳ ರಾಜ್ಯ.
4. ಮುಜಫರ ಅಲಿ ತಂದೆ ಶೇಖ್ ಬರ್ಕರ, ವಯಸ್ಸುಃ 24 ವರ್ಷ, ಉದ್ಯೋಗಃ ಅಡುಗೆಭಟ್ಟ ಕೆಲಸ ಸಾಃ ಸಾಬುಡಾ ತಾಃ ಬೆಲ್ಧಾ ಜಿಃ ಪಶ್ಚಿಮ ಮೇದಿನಪುರ ಪಶ್ಚಿಮ ಬಂಗಾಳ ರಾಜ್ಯ.

5 ಮಖ್ಬೂಲಖಾನ್ ತಂದೆ ಅಯೂಬ್ ಖಾನ್, ವಯಸ್ಸುಃ 33 ವರ್ಷ, ಉದ್ಯೋಗಃ ಅಡುಗೆ ಕೆಲಸ ಸಾಃ ಲಕ್ಷ್ಮಿ ನಾರಾಯಣಪೂರ ನುವಾ ಹಟ್ ಪಂಚಾಯತ್ ತಾಃ ಡೆರಬಿಸ್ ಠಾಣಾ ಜಿಃ ಕೇಂದ್ರಪಡಾ ಓಡಿಸ್ಸಾ ರಾಜ್ಯ.

6 ಸುನಿಲ್ ತಂದೆ ಅರ್ಜನ ಜನಾ, ವಯಸ್ಸುಃ 19 ವರ್ಷ, ಉದ್ಯೋಗಃ

ಹೋಟೆಲ್ ಕೆಲಸ ಸಾಃ ಬಡಾ ನಂದಾಪೂರ ತಾಃ ಬಾಸುದೇಯಾಪೂರ ಠಾಣಾ ಜಿಃ ಬಧ್ರಾಕ್, ಓಡಿಸ್ಸಾ ರಾಜ್ಯ,

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿಃ 14.05.2023 ರಂದು ರಾತ್ರಿ 10.30 ಗಂಟೆಯ ಸುಮಾರು ಯಾದಗಿರಿ ನಗರದ ಹೈದ್ರಾಬಾದ್ ರಸ್ತೆಯಲ್ಲಿರುವ ಶುಭಂ ಪೆಟ್ರೋಲ್ ಪಂಪ್ ಇರುವ ರಾಯಲ್ ಗಾರ್ಡನ ಹೋಟೆಲ್ ಪಕ್ಕದಲ್ಲಿ ಚಾಸಾ-1 ರವರು ತನ್ನ ಕಾರ್ ಪಾರ್ಕಿಂಗ್ ಮಾಡಿದ್ದನ್ನು ತೆಗೆಯಲು ಹೋದಾಗ, ತನ್ನ ಕಾರಿನ ಹಿಂದುಗಡೆ ಬೇರೆ ವಾಹನಗಳು ನಿಲ್ಲಿಸಿದ್ದರಿಂದ ಆ ವಾಹನಗಳು ಈ ಆರೋಪಿ ನಂ.2 ರವರ ರಾಯಲ್ ಗಾರ್ಡನ ಹೋಟೆಲಿಗೆ ಬಂದಿರುವ ಗ್ರಾಹಕರವು ಇರಬಹುದೆಂದು ತಿಳಿದು ಚಾಸಾ-1 ರವರು ಆರೋಪಿ ನಂ.2 ರವರ ಹೋಟೆಲಿಗೆ ಹೋಗಿ, ತನ್ನ ಕಾರಿನ ಹಿಂದುಗಡೆ ನಿಲ್ಲಿಸಿದ ವಾಹನಗಳನ್ನು ತೆಗೆಯಿಸುವಂತೆ ಕೇಳಿದಕ್ಕೆ, ಆರೋಪಿತರಾದ ನೀವು ಹಲ್ಲೆ ಮಾಡುವ ಉದ್ದೇಶದಿಂದ ನೀವುಗಳೆಲ್ಲರು ಅಕ್ರಮಕೂಟ ರಚಿಸಿಕೊಂಡು ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 143 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ದೊಂಬಿ ಮಾಡುವ ಉದ್ದೇಶದಿಂದ ಸದರಿ ಸ್ಥಳದಲ್ಲಿ ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 147 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ನಿಮ್ಮ ಕೈಯಲ್ಲಿ ಚಾಕು ಹಿಡಿದುಕೊಂಡು ಬಂದು ಹಲ್ಲೆ ಮಾಡುವ ಉದ್ದೇಶದಿಂದ ಸದರಿ ಸ್ಥಳದಲ್ಲಿ ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 148 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ನಂ.1, 3, 4, 5, 6 ರವರು ಹಲ್ಲೆ ಮಾಡುವ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, ಏಯ್ ರಾಂಡಕೇ ಯಹಾಸೆ ಚುಪ್ ಜಾ ನಹಿತೋ ತೆರೆಕೋ ತುಕಡೆ ತುಕಡೆ ಕರಕೆ ಪೆಕತೇ ಹೈ ಅಂತಾ

ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 504 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ನಂ.1 ರವರು ಹೋಟೆಲ್ ಒಳಗೆ ಹೋಗಿ ಚಾಕು ಹಿಡಿದುಕೊಂಡು ಓಡಿ ಬಂದು, ಚಾಸಾ-1 ರವರಿಗೆ ಕೊಲೆ ಮಾಡಬೇಕೆಂದು ಚಾಕುದಿಂದ ಹೊಟ್ಟೆಗೆ ತಿವಿಯಲು ಬಂದಾಗ ಚಾಸಾ-1 ರವರು ಆತನಿಂದ ತಪ್ಪಿಸಿಕೊಳ್ಳಲು ಎಡಕೈ ಅಡ್ಡಗಟ್ಟಿದ್ದಕ್ಕೆ, ಚಾಕು ಚಾಸಾ-1 ರವರ ಎಡಕೈ ತೋರುಬೆರಳಿಗೆ ಚುಚ್ಚಿ ರಕ್ತಗಾಯವಾಗಿದ್ದು ಆದ್ದರಿಂದ ತೀರ್ವ ಸ್ವರೂಪ ಗಾಯವಾಗಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 307 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

6. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ನಂ.1 ರವರು ಪುನಃ ಚಾಸಾ-1 ರವರಿಗೆ ಚಾಕುದಿಂದ ಚುಚ್ಚಿ ಕೊಲೆಮಾಡಲು ಬಂದಾಗ ಜಗಳವನ್ನು ಬಿಡಿಸುತ್ತಾ ನಿಂತಿದ್ದ ಮೃತ ಶ್ರೀನಿವಾಸ ಉತನೂರ ಈತನು ಚಾಸಾ-1 ರವರಿಗೆ ಹಿಡಿದುಕೊಂಡು ಪಕ್ಕಕ್ಕೆ ಸರಿಸಿದಾಗ ಆರೋಪಿ ನಂ.1 ರವರು ಸಿಟ್ಟಿಗೆ ಬಂದು ತುಮ್ ಕೌನ್ ಬೇ ಸಾಲೆ, ಬೀಚ್ ಮೆ ಕೈಕು ಆತೆ, ಪಹಲೆ ತುಮ್ಕೋ ಖತಮ್ ಕರಕೆ, ಬಾದಮೆ ಉಸ್ಕು ಖತಮ ಕರತಾಹುಂ ಎಂದು ಮೃತ ಶ್ರೀನಿವಾಸನಿಗೆ ಬೈಯುತ್ತಾ ತನ್ನ ಕೈಯಲ್ಲಿದ್ದ ಚಾಕುದಿಂದ ಮೃತ ಶ್ರೀನಿವಾಸನ ಎಡಪಕ್ಕೆಗೆ ಜೋರಾಗಿ ಚುಚ್ಚಿದ್ದರಿಂದ ಶ್ರೀನಿವಾಸನು ಸತ್ತೆನಪ್ಪೋ ಎಂದು ಚೀರುತ್ತಾ ನೆಲಕ್ಕೆ ಬಿದ್ದು ಒದ್ದಾಡಿ ಮೃತಪಟ್ಟಿದ್ದರಿಂದ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 302 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

7. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಚಾಸಾ-1 ರವರು ಕಾರ್ ಪಾರ್ಕಿಂಗ ಮಾಡಿದ ಎಸ್.ಕೆ.ಎಮ್. ಗ್ಯಾರೇಜ್ ಮುಂದುಗಡೆ ಬಂದಾಗ, ಆರೋಪಿ ನಂ.1, 3, 4, 5, 6 ರವರು ಗುಂಪುಕಟ್ಟಿಕೊಂಡು ಅಪರಾಧ ನಡೆದಾಗ ದುಷ್ಪ್ರೇರಕರ ಹಜಾರಾಗಿದ್ದರಿಂದ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 114 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ **16.02.2025** ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.